ವಯಸ್ಸು ಹದಿನೈದಾ ಅಥವಾ ಮೂವತ್ತೈದಾ ಅಂತ!

ಸ್ವಲ್ಪ ಹೊತ್ತು ಸುಮ್ಮನಿದ್ದ ರಾಕಾ ಮತ್ತೆ ಹೇಳಿದಳು, "ನನ್ನ ಮಾತು ಕೇಳ್ತೀಯಾ ರಾನಾ? ಕೇಳ್ತೀಯಾ?"

"ಗೊತ್ತು ನೀನು ಏನು ಹೇಳ್ತೀಯಾ ಅಂತ. ಬಾಬಾನ ಫೋಟೊ ತಗೊಂಡು ಮನೆಮನೆಗೆ ಹೋಗಬೇಡ ಅಂತೀಯಾ, ಅಲ್ವಾ?"

"ಹೂಂ. ಅದರಿಂದ ಏನು ಪ್ರಯೋಜನ?"

"ಏಕೆ? ನಾನು ಹೋಗಿ ಬಾಬಾನ ಕರ್ಕೊಂಡು ಬರ್ತೀನಿ."

"ಬಾಬಾ ವಾಪಸು ಬರೋದಿಲ್ಲ. ಬಂದರೂ ನಾವು ಮೊದಲಿನ ಥರ ಒಂದೇ ಮನೆಯಲ್ಲಿ ಇರಕೋಗಾಲ್ಲ. ಕಳೆದುಹೋದ ದಿನಗಳು ಮತ್ತೆ ಬರೋದಿಲ್ಲ ಕಣೋ."

"ಯಾರು ಹೇಳಿದ್ರು ಬರೋದಿಲ್ಲ ಅಂತ? ಅಮ್ಮ ಬಾಬಾ ಜೊತೆ ಇರೋಲ್ಲ ಅಂದ್ರೆ ನಾವೇ ಬಾಬಾ ಜೊತೆ ಹೋಗೋಣ."

"ಪ್ಲೀಸ್ ರಾನಾ, ಬೇಡ. ಈ ಬಾಬಾ ಫೋಟೊ ಅವರಿವರಿಗೆ ತೋರಿಸೋದು ಬೇಡ. ಓದಿನ ಕಡೆ ಗಮನ ಕೊಡು. ನನ್ನ ತಮ್ಮ ನೀನು, ಜಾಣ ಅಲ್ವಾ!"

ದೀದಿ ಮಾತು ಮುಗಿಸುವ ಮೊದಲೇ ರಾನಾ ದಿಢೀರನೆ ಪ್ರಶ್ನೆ ಕೇಳಿದ, "ನೀನ್ ಹೇಳ್ತೀಯಾ, ಮಾ, ಸೈಫುಲ್ ಅಂಕಲ್ ಎಲ್ಲಾ ಒಳ್ಳೆಯವರು ಅಂತ. ಎಲ್ರೂ ಒಳ್ಳೆಯವರಾಗಿದ್ರೆ ನಮಗ್ಯಾಕೆ ಇಷ್ಟೊಂದು ದುಃಖ?" ಅವನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು.

"ಗೊತ್ತಿಲ್ಲ."

"ನಿನಗೆ ಎಷ್ಟೊಂದು ಗೊತ್ತು, ಇದು ಗೊತ್ತಿಲ್ವಾ?"

"ಇಲ್ಲ, ನನಗೆ ಗೊತ್ತಿಲ್ಲ. ಗೊತ್ತಾಗೋದು ಬೇಡ, ನೀನು ನನಗೆ ಇದರ ಬಗ್ಗೆ ಏನೂ ಕೇಳಬೇಡ" ನೀರು ತುಂಬಿದ ಕಣ್ಣಲ್ಲಿ ರಾಕಾ ಆ ದಿನ ಹೇಳಿದ್ದಳು, "ನಿಜವಾಗ್ಲೂ, ನನಗೆ ಏನೂ ಗೊತ್ತಾಗುತ್ತಿಲ್ಲ. ನೀನು ನನಗಾದರೂ ಪ್ರಶ್ನೆ ಕೇಳಬಹುದು, ಆದರೆ ನಾನು ಯಾರನ್ನು ಕೇಳಲಿ?"

ಬೆಳಗಿನ ತಿಂಡಿ ಸಮಯ ಆಯ್ತು. ಚುರ್ಣಿಯಮ್ಮ ಕರೆಯಲು ಬಂದಳು, "ಮೊಟ್ಟೆ ಪರೋಟ ತಣ್ಣಗಾಗುತ್ತೆ." ರಾನಾನ ಖಾಲಿ ಹಾಸಿಗೆ ನೋಡಿ ಕೇಳಿದಳು, "ಹೋ ಅಮ್ಮಾ! ಇನ್ನೊಬ್ರು ಎಲ್ಲಿ?"

ರಾಕಾ ಬಾಯಿಂದ ಮಾತು ಹೊರಡಲಿಲ್ಲ. ಅಮ್ಮ ಕೂಡ ಸರಿಯಾಗಿ ಇದೇ ಪ್ರಶ್ನೆ ಕೇಳಿದರೆ ಆಗ ಏನು ಉತ್ತರ ಹೇಳಲಿ?

ರಾನಾ! ಅದೃಶ್ಯನಾಗಿರುವ ರಾನಾ ಮೇಲೆ ಅವಳಿಗೆ ಅಸಾಧ್ಯ ಕೋಪ ಬಂತು!

ಪಕ್ಕದ ರೂಮಲ್ಲಿ ಈಗ ಏನಾಗ್ತಾಯಿದೆ ಅಂತ ರಾಕಾ ಚೆನ್ನಾಗಿ ಕಲ್ಪಿಸಿಕೊಳ್ಳಬಲ್ಲಳು. ಅಮ್ಮ ಮುಖ ತೊಳೆದು ಡ್ರೆಸಿಂಗ್ ಟೇಬಲ್ ಎದುರು ಕೂತಿದ್ದಾಳೆ. ತಲೆ ಬಾಚ್ತಾ ಇದ್ದಾಳೆ, ತುಟಿಗೆ ತೆಳುವಾಗಿ ಬಣ್ಣ, ತಿದ್ದಿ ತೀಡಿದ ಹುಬ್ಬಿನ ನಡುವೆ ಸೀರೆಗೆ ಹೊಂದುವ ಬೊಟ್ಟು, ಅದರೊಟ್ಟಿಗೆ ಅವಳಿಗಿಷ್ಟವಾಗುವ ಪರ್ಫ್ಯೂಮ್ ಕೂಡ ಹಾಕ್ಕೋತಾಳೆ. ಒಂದು ಸಲ ಕನ್ನಡಿಯಲ್ಲಿ ನೋಡ್ಕೋತಾಳೆ. ಆಮೇಲೆ ನಾಲ್ಕಾರು ಹೆಜ್ಜೆ ಎತ್ತಿಟ್ಟರೆ ನೇರವಾಗಿ ಈ ಬಾಗಿಲೆದುರಿಗೆ!

ದೀರ್ಘ ಆಲೋಚನೆಯಲ್ಲಿ ಮುಳುಗಿದ್ದ ರಾಕಾ, "ಒಬ್ಬ ಹುಡುಗ ಇದನ್ನು ನಿನಗೆ ಕೊಡೋಕೆ ಹೇಳಿದ" ಎಂಬ ಚುರ್ಣಿಯಮ್ಮನ ಮಾತಿಗೆ ಬೆಚ್ಚಿಬಿದ್ದಳು.

ರಾಕಾ ಎದೆಯೊಳಗೆ ನಾನಾ ತರಹದ ಶಬ್ದಗಳು ಹೊರಡುತ್ತಿದ್ದವು, ಈಗ ಅವೆಲ್ಲ ಒಂದೇ ಸಲ ಹೊಡಕೊಳ್ಳೋಕೆ ಶುರು ಮಾಡಿದವು. ಅವಳ ಕೈಯಿಂದ ಕಾಗದ ಈಸ್ಕೊಂಡು ಹೇಳಿದಳು, "ನೀನು ಹೋಗು, ಅಮ್ಮನಿಗೆ ಹೇಳು ನಾನು ಬರ್ತಾಇದಿನಿ".

